O.S. NO. 68/2020

PW -1 .

Dated 16-03-2026.

ಸಾಕ್ಷಿಯನ್ನು ಈ ದಿನ ದಿನಾಂಕ 16-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಎ ಎಫ ಪಿ ವಕೀಲರಿಂದಃ

ನನ್ನ ಶಿಕ್ಷಣ 4 ನೇ ತರಗತಿವರೆಗೆ ಆಗಿರುತ್ತದೆ. ದಾವಾ ಆಸ್ತಿಗಳು ಸರ್ವೆ ನಂ. 64 ರಲ್ಲಿ 16 ಎಕರೇ 33 ಗುಂಟೆ, ಸರ್ವೆ ನಂ. 67 ರಲ್ಲಿ 10 ಎಕರೆ 3 ಗುಂಟೆ, ಸರ್ವೆ ನಂ.69 ರಲ್ಲಿ 11 ಎಕರೆ 23 ಗುಂಟೆ, ಸರ್ವೆ ನಂ. 70 ರಲ್ಲಿ 3 ಎಕರೆ 18 ಗುಂಟೆ , ಸರ್ವೆ ನಂ.6 ರಲ್ಲಿ 2 ಎಕರೆ 27 ಗುಂಟೆ, ಸರ್ವೆ ನಂ. 7 ರಲ್ಲಿ 2 ಎಕರೆ 30 ಗುಂಟೆ, ಸರ್ವೆ ನಂ. 73 ರಲ್ಲಿ 17 ಎಕರೆ 6 ಗುಂಟೆ , ಸರ್ವೆ ನಂ. 74 ರಲ್ಲಿ 23 ಗುಂಟೆ ಮತ್ತು 23 ಗುಂಟೆ , ಸರ್ವೆ ನಂ. 65 ರಲ್ಲಿ 2 ಎಕರೆ ಚಿಲ್ಲರೆ ಗುಂಟೆ ಇರುತ್ತವೆ. ಮನೆ ಆಸ್ತಿ ನಂಬರ 672, 674, 676, 681, ಇನ್ನೊಂದು 681 ಮತ್ತು 777 ಇರುತ್ತವೆ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗಳ ಉತಾರಗಳನ್ನು ಪರಿಶಿಲಿಸಿ ನೊಡಿರುತ್ತೇನೆ. ದಾವಾ ಆಸ್ತಳು ಯಾವ ಯಾವ ಸರ್ವೆ ನಂಬರ ಯಾರ ಯರ ಹೆಸರಿನಲ್ಲಿ ಇವೆ ಎಂದು ಹೇಳಬಲ್ಲೆ. ನನ್ನ ಹೆಸರಿನಲ್ಲಿ ಸರ್ವೆ ನಂ. 64 ರಲ್ಲಿ 7 ಎಕರೆ 33 ಗುಂಟೆ , ಸರ್ವೆ ನಂ. 70 ರಲ್ಲಿ 3 ಎಕರೆ 18 ಗುಂಟೆ ಹಿಗೇ 2 ಸರ್ವೆ ನಂಬರಗಳಲ್ಲಿ ಒಟ್ಟು 11 ಎಕರೆ 11 ಗುಂಟೆ ಇರುತ್ತವೆ. ನನ್ನ ತಾಯಿ ಹೆಸರಿನಲ್ಲಿ ಸರ್ವೆ ನಂ. 73 ರಲ್ಲಿ 17 ಎಕರೆ ಚಿಲ್ಲರೆ ಗುಂಟೆ, ಸರ್ವೆ ನಂ. 74 ರಲ್ಲಿ 23 ಗುಂಟೆ , ಸರ್ವೆ ನಂ.65 ರಲ್ಲಿ 1 ಎಕರೆ ಚಿಲ್ಲರೆ ಗುಂಟೆ ಇರುತ್ತವೆ. ಪ್ರತಿವಾದಿ ನಂ. 2 ರ ಹೆಸರಿನಲ್ಲಿ ಸರ್ವೆ ನಂ. 69 ರಲ್ಲಿ 11 ಎಕರೆ 23 ಗುಂಟೆ ಇರುತ್ತದೆ. ಪ್ರತಿವಾದಿ

ನಂ . 3 ಹೆಸರಿನಲ್ಲಿ ಸರ್ವೆ ನಂ. 67 ರಲ್ಲಿ 10 ಎಕರೆ 03 ಗುಂಟೆ ಇರುತ್ತದೆ. ಪ್ರತಿವಾದಿ ನಂ 4 ರ ಹೆಸರಿನಲ್ಲಿ ಸರ್ವೆ ನಂ. 4 ರಲ್ಲಿ 9 ಎಕರೆ , ಸರ್ವೆ ನಂ. 6 ರಲ್ಲಿ 2 ಎಕರೆ 27 ಗುಂಟೆ, ಸರ್ವೆ ನಂ. 7 ರಲ್ಲಿ 2 ಎಕರೆ 30 ಗುಂಟೆ , ಸರ್ವೆ ನಂ. 65 ರಲ್ಲಿ 1 ಎಕರೆ ಚಿಲ್ಲರೆ ಗುಂಟೆ, ಸರ್ವೆ ನಂ. 74 ರಲ್ಲಿ 23 ಗುಂಟೆ ಇರುತ್ತವೆ. ದಾವಾ ಮನೆಗಳು ನನ್ನ ಮತ್ತು ಪ್ರತಿವಾದಿಗಳ ಸಾಮೂಹಿಕ ಹೆಸರಿನಲ್ಲಿ ದಾಖಲಿರುತ್ತವೆ. ನನ್ನ ಹೆಸರಿನಲ್ಲಿ ಇರುವ ಸರ್ವೆ ನಂ. 70 ರಲ್ಲಿಯ ಆಸ್ತಿ ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಅದನ್ನು ಸೇರಿಸಬಹುದು ಎಂದು ನುಡಿದಿರುತ್ತಾರೆ. ಯಾವ ಇಸ್ವಿಯಲ್ಲಿ ನನ್ನ ತಾಯಿ ಹೆಸರು ಆಸ್ತಿಗಳ ಉತಾರದಲ್ಲಿ ದಾಖಲಾಯಿತು ಎಂದರೆ 2001 ನೇ ಇಸ್ವಿಯಲ್ಲಿ ದಾಖಲಾಗಿರುತ್ತದೆ. 2001 ರಲಿ ದಾಖಲಾಗಿರುವುದು ಹೊರತು ಪಡಿಸಿ ನನಗೆ ಮತ್ಯಾವ ಇಸ್ವಿಯಲ್ಲಿ ನನ್ನ ತಾಯಿ ಹೆಸರು ದಾಖಲಾಯಿತು ಎಂದು ನಾನು ಒಕ್ಕುಲುತನ ಮಾಡುವವನು ಇರುವುದರಿಂದ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವೆ ವಾದ ಪತ್ರ ತಯಾರಿಸಲು ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ಆಸ್ತಿಗಳ ಉತಾರ ತಂದು ವಕೀಲರಿಗೆ ಕೊಟ್ಟಿರುತ್ತೇನೆ ನನಗೆ ಹೆಚ್ಚಿಗೆ ಗೊತ್ತಾಗುವುದಿಲ್ಲ ವಕೀಲರಿಗೆ ಗೊತ್ತು ಎಂದು ನುಡಿದಿರುತ್ತಾರೆ. ಸರ್ವೆ ನಂ. 65, 73 ಮತ್ತು 74 ರಲ್ಲಿಯ ಆಸ್ತಿಗಳನ್ನು ನನ್ನ ತಂದೆ ತನ್ನ ಜೀವಿತ ಅವದಿಯಲ್ಲಿ ನನ್ನ ತಾಯಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ತಂದೆ ತನ್ನ ಜೀವಿತ ಅವದಿಯಲ್ಲಿ ಈ ಮೆಲಿನ 3 ಆಸ್ತಿಗಳನ್ನು ನನ್ನ ತಾಯಿಗೆ ಬಿಟ್ಟು ಕೊಟ್ಟಿದ್ದಾನೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ. 1992 ರಲ್ಲಿ ಸರ್ವೆ ನಂ. 64,

67, 69 , ಮತ್ತು 70 ರ ಕುರಿತು ನನ್ನ ತಂದೆ ಜೀವಂತ ಇದ್ದಾಗ ಡೈರಿ ನಂ. 1332 ಮಂಜುರಾಗಿರುತ್ತದೆ. ಸದರಿ ಡೈರಿ ನಂ. 1332 ನ್ನು ರೆವಿನ್ಯೂ ನ್ಯಾಯಾಲಯದಲ್ಲಿ ಆಗಲಿ ಸಿವಿಲ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ. ಸಾಕ್ಷಿ ಮುಂದುವರೆದು ಪ್ರಸ್ತುತ ದಾವೆ ಸಲ್ಲಿಸಿದ ನಂತರ ಎಸಿ ನ್ಯಾಯಾಲಯದಲ್ಲಿ ಸದರಿ ಡೈರಿ ಪ್ರಶ್ನಿಸಿದ್ದೇನೆ ಎಂದು ನುಡಿದಿರುತ್ತಾರೆ. ಎಸಿ ನ್ಯಾಯಾಲಯದಲ್ಲಿ ಒಟ್ಟು 2 ಅಪಿಲುಗಳನ್ನು ಸಲ್ಲಿಸಿದ್ದೇನೆ. 1992 ರಲ್ಲಿ ಆದ ಡೈರಿ ಪ್ರಕಾರ ನಮ್ಮ ಹೆಸರು ಪ್ರತ್ಯೇಕವಾಗಿ ದಾಖಲಾಗಿ ಮುಂದುವರೆದು ಕೊಂಡು ಬರುತ್ತಿವೆ ಎಂದರೆ ಕೇವಲ 4 ಸರ್ವೆ ನಂಬರದಲ್ಲಿ ಮಾತ್ರ ನಮ್ಮ ಹೆಸರುಗಳು ಪ್ರತ್ಯೇಕ ದಾಖಲಾಗಿವೆ ಎಂದು ನುಡಿದಿರುತ್ತಾರೆ. ಸದರಿ ಪ್ರತ್ಯೇಕ ಉತಾರ ಪ್ರಕಾರ ನಾನು ಬ್ಯಾಂಕ ನಿಂದ ನನ್ನ ಸ್ವಂತ ಹೆಸರಿನಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸಾಕ್ಷಿ ಒಟ್ಟಿಗೆ ಸೇರಿ ಸಾಮೂಹಿಕದಲ್ಲಿ ಸಾಲ ಪಡೆಯುತ್ತಿದ್ದೇವೆ ಎಂದು ನುಡಿದಿರುತ್ತಾರೆ. ನಾನು 1999 ರಿಂದ 2004 ರ ವರೆಗೆ ನಾನು ತಾಲೂಕ ಪಂಚಾಯತಿ ಸದಸ್ಯ ಇದ್ದೇನು, ನಂತರ 2005 ರಿಂದ 2010 ರ ವರೆಗೆ ಜಿಲ್ಲಾ ಪಂಚಾಯತಿ ಸದಸ್ಯ ನಾಗಿದ್ದೇನು. ಆಸ್ತಿ ಉತಾರದಲ್ಲಿ ಹೆಸರು ಇದ್ದವರಿಗೆ ಮಾತ್ರ ಬ್ಯಾಂಕನಿಂದ ಸಾಲ ಕೊಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ನಮ್ಮ ಹೆಸರಿನಿಂದ ಸಾಲ ಸಾಮೂಹಿಕವಾಗಿ ಕೂಡಿ ಇದ್ದಾಗ ಸಾಲ ಪಡೆದಿರುತ್ತೇವೆ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ನಿಪಿ - 8 ರಲ್ಲಿ ನನ್ನ ಒಬ್ಬನದೇ ಹೆಸರು ದಾಖಲಿದೆ ಎಂದರೆ ನಿಜ, ಆದರೆ ಸಾಲ ಎಲ್ಲರೂ ಸೇರಿ ಪಡೆಯುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ಪಹಣಿ ಪತ್ರಿಕೆ ಸರ್ವೆ ನಂ. 70 ನನ್ನ ಹೆಸರಿನಲ್ಲಿ

ಇರುವಂತಹ ಆಸ್ತಿಯ ಪಹಣಿ ಪತ್ರಿಕೆ ಎಂದರೆ ಸರಿ. ಸಾಕ್ಷಿ ಸದರಿ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಡಿ - 1 ಎಂದು ಗುರುತಿಸಲಾಯಿತು. ಸರ್ವೆ ನಂ. 64 ಮತ್ತು 70 ರಲ್ಲಿ ನನ್ನ ಒಬ್ಬನದೇ ಹೆಸರು ದಾಖಲಿರುವುದರಿಂದ ಸಾಲವನ್ನು ನಾನು ಸ್ವಂತಕ್ಕೆ ಪಡೆದಿರುತ್ತೇನೆ ಎಂದರೆ ಸಾಕ್ಷಿ ಸರ್ವೆ ನಂ. 70 ರ ಆಸ್ತಿ ಮೇಲೆ ಇತ್ತಿಚೆಗೆ ಐಸಿಐಸಿಐ ಬ್ಯಾಂಕ ನಿಂದ ಸ್ವಂತಕ್ಕೆ ಸಾಲ ಪಡೆದಿದ್ದೇನೆ ಎಂದು ನುಡಿದಿರುತ್ತಾರೆ. ಸರ್ವೆ ನಂ. 64 ಮತ್ತು 70 ರಲ್ಲಿ ನಾನು ನನ್ನ ಸ್ವಂತಕ್ಕೆ ಸಾಲ ಪಡೆದಿರುತ್ತೇನೆ ಎಂದರೆ ಸಾಕ್ಷಿ ಸರ್ವೆ ನಂ. 64 ರಲ್ಲಿ ಕೂಡಿ ಇದ್ದಾಗ ಬಹಳ ವರ್ಷಗಳ ಹಿಂದೆ ಸಾಲ ಪಡೆದಿರುತ್ತೇವೆ ಎಂದು ನುಡಿದಿರುತ್ತಾರೆ. ಕೂಡಿ ಇದ್ದಾಗ ಅಜಮಾಸು 1989-1990 ನೇ ಇಸ್ವಿಯ ಪೂರ್ವದಲ್ಲಿ ಸಾಲ ಪಡೆದಿರುತ್ತೇವೆ. ಈಗ ತೊರಿಸಿದ ನಿಪಿ - 20 ಡೈರಿ ನಂ. 1332 ಪ್ರಕಾರ ಅಪಸಾತ ವಾಟ್ನಿ ಪ್ರಕಾರ ಆಸ್ತಿಗಳು ಹಂಚಿಕೆ ಮಾಡಿಕೊಂಡಿರುತ್ತೇವೆ ಎಂದರೆ ನನ್ನ ತಂದೆ ಜೀವಿತ ಅವದಿಯಲ್ಲಿ ನಾನು ಅಲ್ಪವಹಿ ಇದ್ದೇನು ನನ್ನ ತಾಯಿ ಸಂರಕ್ಷದಾರಳಾಗಿ ಇದ್ದಳು, ನನ್ನ ಅಲ್ಪವಹಿ ಸಂರಕ್ಷಕಳಾದ ನನ್ನ ತಾಯಿ ಕಡಿಮೆ ಗೊಳಿಸಲು ಮತ್ತು ಸರ್ಕಾರದ ಸವಲತ್ತು ಪಡೆಯುವ ಸಲುವಾಗಿ ಆಸ್ತಿಗಳು ಪ್ರತ್ಯೇಕ ಹೆಸರಿನಲ್ಲಿ ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ - 20 ರಲ್ಲಿ ಸರ್ವೆ ನಂ. 70 ರಲ್ಲಿ 3 ಎಕರೆ 18 ಗುಂಟೆ ಮತ್ತು ಸರ್ವೆ ನಂ. 64 ರಲ್ಲಿ 7 ಎಕರೆ 33 ಗುಂಟೆ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಉಳಿದವರಿಗೆ ಎಷ್ಟು ಎಷ್ಟು ಆಸ್ತಿ ಹೊಗಿರುತ್ತವೆ ಎಂದು ನಿಪಿ - 20 ರಲ್ಲಿ ಕಾಣಿಸಿದ ಪ್ರಕಾರ ನಮ್ಮ ಮಧ್ಯೆ ವಾಟ್ನಿ ಆಗಿರುತ್ತದೆ ಎಂದರೆ ಸುಳ್ಳು.

O.S. NO. 68/2020

PW -1 .

Dated 16-03-2026.

ನನ್ನ ಜನ್ಮ ದಿನಾಂಕ 22-11-1963 ಇರುತ್ತದೆ. ನಿಪಿ - 20 ರ ಡೈರಿ 1332 ಮಂಜುರಾದಾಗ ನನ್ನ ವಯಸ್ಸು 26-27 ವರ್ಷ ಇದ್ದೀರಬಹುದು. ಆಗ ನಾನು ಸುಜ್ಞಾನಿ ಇದ್ದೇನು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಒಕ್ಕುಲುತನ ಮಾಡುವ ಮನುಷ್ಯ ಎಂದು ನುಡಿದಿರುತ್ತಾರೆ. ನಿಪಿ - 20 ರಲ್ಲಿ ತೋರಿಸಿದಂತೆ ವಾಟ್ನಿ ಸರಿ ಇರುವುದ್ಲಿ ಅಂತಾ 2020 ರವರೆಗೆ ಸದರಿ ಡೈರಿ 1332 ಪ್ರಶ್ನಿಸಿರುವುದಿಲ್ಲ ಎಂದರೆ ನಾವು ಎಲ್ಲರೂ ಕೂಡಿಯೇ ಇದ್ದೇವು, ಹೀಗಾಗಿ ಪ್ರಶ್ನಿಸುವ ಪ್ರಸಂಗ ಉಂಟಾಗಿರುವುದಿಲ್ಲ ಎಂದು ನುಡಿದಿರುತ್ತಾರೆ.

ನನ್ನ ತಂದೆ ದಿನಾಂಕ 18-12-1999 ರಂದು ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತ ಪಟ್ಟ ನಂತರ ನನ್ನ ತಂದೆ ಹೆಸರಿನಲ್ಲಿ ಎಷ್ಟು ಎಷ್ಟು ಆಸ್ತಿಗಳು ಇವೆ ಎಂದು ಚೌಕಾಸಿ ಮಾಡಿದ್ದೀರಾ ಎಂದರೆ ಮಾಡಿದ್ದೆನೆ. ನನ್ನ ತಂದೆ ಹೆಸರಿನಲ್ಲಿ ಒಟ್ಟು 22 ಎಕರೆ ಆಸ್ತಿ ಇತ್ತು. ನನ್ನ ತಂದೆ ಮೃತಪಟ್ಟ ನಂತರ ನಮ್ಮ ಕುಟಂಬಂದ ಆಸ್ತಿಗಳು ಎಷ್ಟು ಇವೆ ಎಂದು ದಾಖಲೆ ತೆಗೆಸಿ ನೊಡಿದ್ದೀರಾ ಎಂದರೆ 4 ನೇ ಪ್ರತಿವಾದಿ ಹಿರೇತನ ಮಾಡುತ್ತಿದ್ದುದರಿಂದ ನನಗೆ ದಾಖಲೆ ಪರಿಶಿಲಿಸುವ ಪ್ರಸಂಗ ಉದ್ಭವಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ವಾದ ಪತ್ರದಲ್ಲಿ 4 ನೇ ಪ್ರತಿವಾದಿ ಒಟ್ಟು ಕುಟುಂಬದ ಹಿರೇತನ ಮಾಡುತಿದ್ದ ಎಂದು ಬರೆಸಿದ್ದೀರಾ ಎಂದರೆ ನಾನು ವಕೀರಿಗೆ ಮಾಹಿತಿ ಕೊಟ್ಟಿದ್ದೇನೆ ಅವರು ಬರೆದಿದ್ದಾರೊ ಇಲ್ಲವೊ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

O.S. NO. 68/2020
PW –1 .
Dated 16–03–2026.

ತಾಲೂಕ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಸದಸ್ಯರು ಹಳ್ಳಿಯಲ್ಲಿ ಹಿರೇತನ ಮಾಡುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಅತ್ಯಂತ ಬುದ್ದಿವಂತ ಮತ್ತು ಚಾಣಾಕ್ಷ ವ್ಯಕ್ತಿ ಎಂದರೆ ಸರಿಯಲ್ಲ. ಹೀಗಾಗಿ ನನಗೆ ನಮ್ಮ ಕುಟುಂಬಂದ ಹಿರೇತನ ಮಾಡುತ್ತಾ ನನಗೆ ರಾಜಕೀಯದಲ್ಲಿ ಬಾಗವಹಿಸಲು ನನಗೆ ಅವಕಾಶ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ರಾಜಕೀಯದಿಂದ ಯಾವುದೇ ಆದಾಯ ಇರಲಿಲ್ಲ, ನನ್ನ ರಾಜಕೀಯಕ್ಕೆ ಕುಟುಂಬ ಆಸ್ತಿಗಳಿಂದ ಬಂದ ಆದಾಯವನ್ನು ನನ್ನ ರಾಜಕೀಯಕ್ಕೆ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಆಸ್ತಿ ಮಾರಾಟ ಮಾಡಿ ನಾನು ರಾಜಕೀಯದಲ್ಲಿ ಸಕ್ರಿಯವಾಗಿ ಬಾಗವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.